ಈ ಸಲ ಬರತೈತಿ' ಎಂದು ಪರಿಚಯವಿದ್ದ ಮೂರ್ನಾಲ್ಕು ಹಳ್ಳಿಯವರಿಗೆ ಹೇಳಲು ಅವರು ಸಂತೋಷಗೊಂಡು ಉಬ್ಬಿದರು.

ಶಿವಣ್ಣನ ಹತ್ತಿರ 'ಕೆಲಸ ಯಾವಾಗ ಸುರು ಆಕ್ಕೈತಿ?' ಎಂದು ವಿಚಾರಿಸತೊಡಗಿದರು. ಕೆಲವರು ಅವನಿಗೆ ಚಿಕಣಿ ಅಡಿಕೆ ಕೊಡುವುದರತ್ತ, ಮತ್ತೆ ಕೆಲವರು ಅದೇ ಆಗ ಸಂತೆಯಿಂದ ತಂದಿದ್ದ ಎಲೆಕಟ್ಟನ್ನು ಮುಂದು ಮಾಡಿ ಹಿಡಿಯುವುದರತ್ತ, ಇನ್ನೂ ಕೆಲವರು ತಂಬಾಕು ಚೀಟಿ ತೆಗೆಯುವುದರತ್ತ ಆಸಕ್ತರಾಗಿದ್ದರು. ಮಾಯಕ್ಕಳ ಒತ್ತಾಯಕ್ಕೆ ತಂಬಾಕು ತಿನ್ನುವುದಿಲ್ಲವೆಂದು ಸವದತ್ತಿ ಯಲ್ಲಮ್ಮದೇವಿಯ ಮುಂದೆ ಪ್ರಮಾಣ ಮಾಡಿದ್ದ ಶಿವಣ್ಣನು ಆ ವಚನ ಈಗ ನೆನಪಾದುದಕ್ಕೆ ಒಂದು ರೀತಿಯಲ್ಲಿ ಖುಷಿಯಿಂದ ಮತ್ತೊಂದು ರೀತಿಯಲ್ಲಿ ದುಃಖದಿಂದ ತಂಬಾಕು ಕೊಡುವವರ ಕೈಗಳನ್ನು ದೂರ ತಳ್ಳಿದನು. ಇಲೆಕ್ಸನ್ ಟೈಮಿನಲ್ಲಿ ಆ ಕೈಗಳಿಗೆ ತಾನೆ ಹತ್ತಾರು ಚೀಟಿ ಸುರುವಿದ್ದನು. ಮಲ್ಲೂರಿಗೆ ಪರದೇಸಿಯಂತೆ ಬಂದಿದ್ದ ಹೆಂಗಸೊಬ್ಬಳು ಊರ ಪ್ರಮುಖಳಾಗುವುದೆಂದರೇನು? ಅವಳನ್ನು ಕರೆತಂದಿದ್ದ ದೇವಪ್ಪ ತೆರೆಯ ಮರೆಗೆ ಸರಿದು ಶಿವಣ್ಣನ ಜೊತೆ ರಾಜಾರೋಷವಾಗಿ ಅಡ್ಡಾಡತೊಡಗಿ ಈಗ ಗಂಡಹೆಂಡತಿಯರೆ ಆಗಿಬಿಟ್ಟಿದ್ದಾರೆ. ಹಿಂದೆ ಅವಳು ಹೀಗೆಲ್ಲ ಇದ್ದಳು ಎಂದರೆ ಯಾರೂ ನಂಬುವ ಹಾಗಿಲ್ಲ. ಹಾಗೆ ಹೇಳಿದವನನ್ನು ಹುಚ್ಚ ಎನ್ನುತ್ತಾರೆ. ಈಗ ಸಿದ್ದಣ್ಣ ಹುಚ್ಚ ಆಗಿಲ್ಲವೆ? ಸ್ವಂತ ಮೈದುನನನ್ನು ಹಿಂದೆ ಸರಿಸಿ, ಅವನ ತಲೆ ಕೆಡಿಸಿ, ತಾನೇ ಅಧಿಕಾರದ ಗದ್ದುಗೆ ಹಿಡಿದಳು ಎಂದು ಕೆಲವರ ಅಂಬೋಣವಾದರೆ ಸಿದ್ದು ಚೇರಮನ್ ಆಗಿ ಮತ್ತೊಮ್ಮೆ ಆರಿಸಿ ಬಂದಿದ್ದರೆ ಊರು ಇಷ್ಟೊತ್ತಿಗೆ ಸಂಪೂರ್ಣ ಹಾಳಾಗಿರುತ್ತಿತ್ತು ಎಂದು ಇನ್ನೂ ಕೆಲವರು ಮಾಯಕ್ಕಳ ಪರ ಮಾತಾಡುತ್ತಿದ್ದರು. ಅವಳು ಆರಿಸಿ ಬಂದ ಮೇಲೆ ಊರಲ್ಲಿ ಒಂದೆರಡು ಬೋರ್‌ವೆಲ್‌ಗಳಾದರೂ ಆದವು, ಹೆರಿಗೆ ಆಸ್ಪತ್ರೆಯಾದರೂ ಬಂತು, ಹೊಂಗಲ ಹಾದಿ ಡಾಂಬರ್ ಮುಖವನ್ನಾದರು ಕಂಡಿತು ಎಂದು ಅವಳನ್ನು ಅಟ್ಟಕ್ಕೇರಿಸುತ್ತಿದ್ದರು. ಅಂಥದರ ನಡುವೆ ಸಿದ್ದೂನ ಕಥಿ ನೆನಪಿಸಿಕೊಂಡು 'ಪಾಪ, ಅಂವಗ ಹಂಗ ಆಗಬಾರದಾಗಿತ್ತು. ಹುಚ್ಚನಂಗ ಹೊಂಗಲ ತುಂಬ ಅಡ್ಯಾಡತಿರತಾನು', ಒಬ್ಬರು ಅವನನ್ನು ಕಿತ್ತೂರು ಚೆನ್ನಮ್ಮನ ಸಮಾಧಿಯ ಬಳಿ ನೋಡಿದರೆ ಮತ್ತೊಬ್ಬರು ಸಂಗೊಳ್ಳಿ ರಾಯಣ್ಣನ ಮೂರ್ತಿಯ ಬಳಿ ಇದ್ದುದನ್ನು ವಿವರಿಸುತ್ತಿದ್ದರು.

'ನಮ್ಮ ಮಾಯಕ್ಕ ಕುದುರಿ ಹತ್ತಿದ್ರ ಚೆನ್ನಮ್ಮನಂಗ ಕಾಣ್ತಾಳು. ಆಕಿ ಹಂಗ ರಾಜ್ಯಭಾರ ಮಾಡಲಿಕ್ಕೆ ಹತ್ಯಾಳು. ಯವ್ವಾ, ನನ್ನ ಕ್ಷಮಾ ಮಾಡಬೆ' ಎಂದು ಹೇಳುತ್ತಾನಂತೆ ಸಿದ್ದಣ್ಣ. ರಾಣಿ ಚೆನ್ನಮ್ಮನ ಭವ್ಯವಾದ ಪ್ರತಿಮೆಯೆದುರು ಏನೇನೋ ತಿಳಿಯಲಾರದ್ದು ಮಾತಾಡುತ್ತ ಅಲ್ಲಿಯ ಕಸಗುಡಿಸುವನು. ಆ ಪಾರ್ಕಿನಲ್ಲಿದ್ದ ಕೆಲಸಗಾರನು 'ಸಿದ್ದಣ್ಣ, ನೀನು ಹೀಂಗs ಕೆಲಸ ಮಾಡಿದ್ರ ನಿನ್ನ ತಲಿ ಒಂದಲ್ಲ ಒಂದ ದಿನ ಸುದ್ದ ಆಗತೈತಿ.' ಅವನಿಗೆ ಮತ್ತಷ್ಟು ಭರವಸೆ ತುಂಬುವನು. ಒಂದಷ್ಟು ದಿನ ಹಾಗೆ ಕಸಗುಡಿಸುವ, ಎಲೆ ಆರಿಸುವ, ಊರ ಪಂಚಾಯತಿ ಕಟ್ಟೆಯನ್ನು ನೀರಿನಿಂದ ತೊಳೆಯುವ ಕೆಲಸವನ್ನು ಅವನು ಅಚ್ಚುಕಟ್ಟಾಗಿ ಮಾಡುವನು.



'ತಾನು ಮಾಡಿದ ಪಾಪಗಳನ್ನು ಈಗ ತೊಳಿಲಿಕ್ಕೆ ಸುರು ಮಾಡ್ಯಾನ.' ಮಂದಿ ಹೀಯಾಳಿಸುವರು. ಅವನಿಗೆ ಅದು ಅರ್ಥವಾಗದೆ ಮತ್ತಷ್ಟು ಶ್ರದ್ಧೆಯಿಂದ ಸ್ವಚ್ಛಗೊಳಿಸುತ್ತ 'ಹೀ ಹೀ' ಎಂದು ನಗುವನು. 'ಪಾಪ! ಎಲ್ಲಾರೂ ಸಿದ್ದೂನ ಕೆಟ್ಟತನ ನೆನಪ ಇಟ್ಕೋತಾರ ಹೊರತು ಈ ಗಯ್ಯಾಳಿ ಊರ ಮಂದಿ ಮಳ್ಳ ಮಾಡಿದ್ದನ್ನ ಹೇಳೋದs ಇಲ್ಲ. ಈಗಂತೂ ಆಕಿ ಅಧಿಕಾರದಾಗ ಬಂದ್ಲು. ಅಕೀನ ಮೆರೆಸ್ತಾರು.' ಸೋಮಪ್ಪನ ಹೆಂಡತಿ ಲಕ್ಷ್ಮೀ ಅಲ್ಲಿ ಇಲ್ಲಿ ತನ್ನ ಹೊಟ್ಟೆಯೊಳಗೆ ಬಾಕಿ ಉಳಿಸಿಕೊಂಡಿದ್ದ ಕಹಿಯನ್ನು ಕಾರಿಕೊಳ್ಳುತ್ತಿದ್ದಳು. ಅವಳ ಮಾತಿಗೆ ಹೂಂ, ಹಾಂ ಅನ್ನದೆ ಸಾಗಹಾಕುವ ಅಕ್ಕಪಕ್ಕದವರು 'ತಾನೇನು ಚಲೊ ಅಂತ ಹೇಳಾಕ ಬಂದಾಳ ಈಕಿ. ಈಕಿ ಗಂಡ ಆರಿಸಿ ಬಂದಿದ್ರ ಇನ್ನೂ ಕೆಟ್ಟಿತ್ತು. ಪಾಪ, ಮಾಯಕ್ಕ ಬಂದಾಳ ಅಂತ್ಹೇಳಿ ಎಲ್ಲಾರೂ ಪಂಚಾಯತಿ ನೋಡೋವಂಗ ಆತು, ಅಲ್ಪ ಸ್ವಲ್ಪ